ಡಿ.ಡಬ್ಲ್ಯು-01

**ಸಾಕ್ಷಿಯನ್ನು ದಿನಾಂಕಃ 26.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿಗಳ ಪರ ಶ್ರೀ. ಜೆ.ಎಸ್. ವಕೀಲರಿಂದಃ**

ಸಿಂಗನಾಯಕ ನನಗೆ ಮಾವನಾಗಬೇಕು. ದಾವಾ ಆಸ್ತಿಯ ದಕ್ಷಿಣಕ್ಕೆ ಸ.ನಂ. 166 ಹಾಗು ಸ.ನಂ. 167ರ ಜಮೀನು ಇರುತ್ತದೆಂದರೆ ಸರಿ. ಸದರಿ ಸ.ನಂ. 166 ಹಾಗು ಸ.ನಂ. 167ರ ಜಮೀನು ಮೂಲತಃವಾಗಿ ಮಾದನಾಯಕರವರ ಕುಟುಂಬಕ್ಕೆ ಸೇರಿದ ಆಸ್ತಿ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ಜಮೀನನ್ನು ಮಾದನಾಯಕರವರು ದಿನಾಂಕಃ 15.12.1965 ರಂದು ಟಿ.ಜಿ. ಮುತ್ತುವೀರನ್ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ಜಮೀನಿಗೆ ಸಂಬಂಧಿಸಿದಂತೆ ಟಿ.ಜಿ. ಮುತ್ತುವೀರನ್ ರವರು ತಮ್ಮ ಮಗನಾದ ಗೋವಿಂದರಾಜು ಎನ್ನುವವರಿಗೆ ದಿನಾಂಕಃ 02.07.1994 ರಂದು ನೋಂದಾಯಿತ ವಿಲ್ ಬರೆದಿರುತ್ತಾರೆಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ವಿಲ್ ನ ಆಧಾರದ ಮೇಲೆ ಗೋವಿಂದರಾಜುರವರು ಸದರಿ ಜಮೀನಿಗೆ ಸಂಬಂಧಿಸಿದಂತೆ ಖಾತೆ ಬದಲಾಯಿಸಿಕೊಂಡು ಸ್ವಾಧೀನ ಹೊಂದಿರುತ್ತಾರೆಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನಗೆ ಸದರಿ ಗೋವಿಂದರಾಜುರವರ ಮಗಳಾದ ಕುಮುದಾರವರ ಬಗ್ಗೆ ಗೊತ್ತಿರುವುದಿಲ್ಲ. ಸದರಿ ಗೋವಿಂದರಾಜುರವರು ಮೃತಪಟ್ಟ ನಂತರ ಅವರ ಮಗಳಾದ ಕುಮುದಾರವರು ಸದರಿ ಜಮೀನಿಗೆ ಸಂಬಂಧಿಸಿದಂತೆ ತನ್ನ ಹೆಸರಿಗೆ ಖಾತೆ ಬದಲಿಸಿಕೊಂಡು ಸ್ವಾಧೀನಾನುಭವ ಹೊಂದಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಈಶ್ವರ ಹಾಗು ಅವರ ಮಕ್ಕಳು ಇರುತ್ತಾರೆಂದು ನುಡಿಯುತ್ತಾರೆ. ಸದರಿ ಕುಮುದಾರವರು ದಿನಾಂಕಃ 02.02.2022 ರಂದು ಸದರಿ ಜಮೀನನ್ನು ಮುತ್ತುವೀರನ್ ರವರ ಮಗನಾದ ಈಶ್ವರ ಎಂ. ರವರಿಗೆ ಕ್ರಯ ಪತ್ರ ಬರೆದುಕೊಟ್ಟಿರುತ್ತಾರೆಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ.

ಈಗ ಸದರಿ ಜಮೀನಿನ ಸ್ವಾಧೀನದಲ್ಲಿ ಈಶ್ವರ ಹಾಗು ಅವರ ಮಕ್ಕಳು ಇರುತ್ತಾರೆ. ಅದೇ ರೀತಿ ಸದರಿ ಈಶ್ವರರವರು ದಿನಾಂಕಃ 04.12.2023 ರಂದು ಸದರಿ ಜಮೀನಿಗೆ ಸಂಬಂಧಿಸಿದಂತೆ ತನ್ನ ಮಗನಾದ ದಿಲೀಪ್ ಕುಮಾರ್ ಇ. ರವರಿಗೆ ನೋಂದಾಯಿತ ದಾನ ಪತ್ರ ಬರೆದುಕೊಟ್ಟಿರುತ್ತಾರೆಂದರೆ ಸರಿ. ಈಗ ಸದರಿ ದಿಲೀಪ್ ಕುಮಾರ್ ರವರ ಸದರಿ ಜಮೀನಿನ ಮಾಲೀಕರಾಗಿ ಸ್ವಾಧೀನಾನುಭವ ಹೊಂದಿರುತ್ತಾರೆಂದರೆ ಸರಿ. ಸದರಿ ಜಮೀನಿಗೆ ಸಂಬಂಧಿಸಿದ ಕ್ರಯ ಪತ್ರ ಹಾಗು ದಾನ ಪತ್ರದಲ್ಲಿ ಸದರಿ ಜಮೀನಿನ ಉತ್ತರಕ್ಕೆ ಬಸವನಾಯಕ, ಭದ್ರನಾಯಕ ಹಾಗು ಇತರರ ಜಮೀನು ಇರುವುದಾಗಿ ನಮೂದು ಇರುತ್ತದೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅಲ್ಲಿ ನಮ್ಮ ಜಮೀನು ಇರುತ್ತದೆಂದು ನುಡಿಯುತ್ತಾರೆ. ಸದರಿ ಜಮೀನಿನ ಉತ್ತರಕ್ಕೆ ದಾವಾ ಆಸ್ತಿ ಇರುತ್ತದೆಂದರೆ ಸರಿ. ಸಾಕ್ಷಿ ಮುಂದುವರೆದು ಅದು ನಮ್ಮದೇ ಆಸ್ತಿಯಾಗಿರುತ್ತದೆಂದು ನುಡಿಯುತ್ತಾರೆ. ನಾನು ದಾವಾ ಆಸ್ತಿಯ ಸ್ವಾಧೀನದಲ್ಲಿ ಇಲ್ಲದೇ ಇರುವುದರಿಂದ ಸದರಿ ಕ್ರಯ ಪತ್ರ ಹಾಗು ದಾನ ಪತ್ರಗಳಲ್ಲಿ ಸದರಿ ಜಮೀನಿನ ಉತ್ತರಕ್ಕೆ ನಮ್ಮ ಜಮೀನು ಎಂದು ನಮೂದಾಗಿರುವುದಿಲ್ಲವೆಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದ ಮೂಲ ಮಾಲೀಕತ್ವ ದಾಖಲೆಗಳಾದ ಕ್ರಯ ಪತ್ರ, ದಾನ ಪತ್ರ ಅಥವಾ ವಿಲ್ ಯಾವುದಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಎಲ್ಲಾ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆಂದು ನುಡಿಯುತ್ತಾರೆ.

ನನ್ನ ಮಾವ ಸಿಂಗನಾಯಕ ದಿನಾಂಕಃ 05.11.1968 ರಂದು ಎನ್.ಸಿ. ಪುಟ್ಟಾಚಾರಿಯವರಿಂದ 08 ಗುಂಟೆ ಜಮೀನನ್ನು ಕ್ರಯಕ್ಕೆ ಪಡೆದಿದ್ದರು ಎಂದರೆ ಸರಿ. ಸದರಿ ಜಮೀನಿನಲ್ಲಿ ನಾವು ಸ್ವಾಧೀನದಲ್ಲಿರುತ್ತೇವೆಂದರೆ ಸರಿ. ಅದೇ ರೀತಿ ನನ್ನ ಮಾವ ಸಿಂಗನಾಯಕ ದಿನಾಂಕಃ 13.01.1964 ರಂದು ಬೋಳೇಗೌಡರ ಮಗ ಮರೀಗೌಡ

ಎನ್ನುವವರಿಂದ ಸ.ನಂ. 168 ರಲ್ಲಿ 03 ಎಕರೆ 25 ಗುಂಟೆ ಪೈಕಿ 15 ಗುಂಟೆ ಜಮೀನನ್ನು ಖರೀದಿ ಮಾಡಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ 15 ಗುಂಟೆ ಜಮೀನಿನಲ್ಲಿ ನಾವು ಸ್ವಾಧೀನದಲ್ಲಿದ್ದೆವೋ ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರೆದು 03 ಎಕರೆ 25 ಗುಂಟೆ ಜಮೀನನಲ್ಲಿ ಸ್ವಾಧೀನ ಹೊಂದಿರುತ್ತೇವೆಂದು ನುಡಿಯುತ್ತಾರೆ. ಸದರಿ ಮೇಲೆ ಹೇಳಿದ 08 ಗುಂಟೆ ಹಾಗು 15 ಗುಂಟೆ ಜಮೀನನ್ನು ಹೊರತುಪಡಿಸಿ ನನ್ನ ಮಾವನಾದ ಸಿಂಗನಾಯಕ ಬೇರೆ ಯಾವುದೇ ಜಮೀನನ್ನು ಖರೀದಿ ಮಾಡಿರುವುದಿಲ್ಲವೆಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಮಾಲೀಕತ್ವದ ದಾಖಲೆ ಇದ್ದಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದಿರಿ ಎಂದರೆ ಸಾಕ್ಷಿಯು ಹಾಜರುಪಡಿಸಿರುತ್ತೇನೆಂದು ನುಡಿಯುತ್ತಾರೆ. ದಾವಾ ಸ್ವತ್ತಿಕ್ಕೆ ಸಂಬಂಧಿಸಿದಂತೆ ವಾದಿಗಳ ಮಾಲೀಕತ್ವ ಹಾಗು ಸ್ವಾಧೀನಕ್ಕೆ ಸಂಬಂಧಿಸಿದಂತೆ ಪ್ರಶ್ನಿಸಿ ಯಾವುದಾದರೂ ದಾವೆ ಹೂಡಿದ್ದೀರಾ ಎಂದರೆ ಸಾಕ್ಷಿಯು ಅದು ನಮ್ಮ ಜಮೀನಾಗಿದ್ದು ದಾವೆ ಹೂಡುವ ಅಗತ್ಯ ಇದ್ದಿರುವುದಿಲ್ಲವೆಂದು ನುಡಿಯುತ್ತಾರೆ. ನಿ.ಪಿ.-15 ರಲ್ಲಿ ಕಾಣುವ ಕೊಳವೇ ಬಾವಿ ದಾವಾ ಆಸ್ತಿಯಲ್ಲಿ ಇರುತ್ತದೆಂದರೆ ಸರಿ. ಸಾಕ್ಷಿ ಮುಂದುವರೆದು ಅದಕ್ಕೆ ನಾವು ಸರ್ಕಾರಕ್ಕೆ ಹಣವನ್ನು ಸಹ ಪಾವತಿಸಿರುತ್ತೇವೆಂದು ನುಡಿಯುತ್ತಾರೆ. ನಮ್ಮ ಜಮೀನಿನಲ್ಲಿ 02 ಬೋರ್ ವೆಲ್ ಗಳಿರುತ್ತವೆ. ಅವುಗಳಲ್ಲಿ 01 ಬೋರ್ ವೆಲ್ ಕಟ್ಟಿಸಿದ್ದು ಇನ್ನೊಂದು ಕಟ್ಟಿಸಲು ಬಾಕಿ ಇರುತ್ತದೆಂದು ನುಡಿಯುತ್ತಾರೆ. ನಿ.ಪಿ.-15 ರಲ್ಲಿ ಕಾಣಿಸುವ ದಾವಾ ಸ್ವತ್ತಿನಲ್ಲಿರುವ ಬೋರ್ ವೆಲ್ ಅನ್ನು 3 ನೇ ವಾದಿ ರಿಪೇರಿ ಮಾಡಿಸಿರುತ್ತಾರೆಂದರೆ ಸಾಕ್ಷಿಯು ಅವರು ಮೋಸದಿಂದ ಫೋಟೋ ತೆಗೆದಿರುತ್ತಾರೆಂದು ನುಡಿಯುತ್ತಾರೆ. ಅದೇ ರೀತಿ ನಿ.ಪಿ.-17 ರಲ್ಲಿ ಕಾಣಿಸುವ ಫೋಟೋದಂತೆ ವಾದಿಗಳೇ ದಾವಾ ಸ್ವತ್ತಿನಲ್ಲಿ ಸ್ವಾಧೀನ ಹೊಂದಿ ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆಂದರೆ ಸರಿಯಲ್ಲ. ಅದೇ ರೀತಿ ನಿ.ಪಿ.-16 ರಲ್ಲಿ

ಕಾಣಿಸುವ ಫೋಟೋದಂತೆ ವಾದಿಗಳೇ ದಾವಾ ಸ್ವತ್ತಿನಲ್ಲಿ ಉಳುಮೆ ಮಾಡುತ್ತಿದ್ದಾರೆಂದರೆ ಸರಿಯಲ್ಲ. ಅದೇ ರೀತಿ ನಿ.ಪಿ.-18 ರಲ್ಲಿ ಕಾಣಿಸುವ ಫೋಟೋದಂತೆ ವಾದಿಗಳೇ ದಾವಾ ಸ್ವತ್ತಿನಲ್ಲಿ ಶೆಡ್ ಅನ್ನು ಹಾಕಿಕೊಂಡು ವಾಸ ಮಾಡುತ್ತಿದ್ದಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಾವಾ ಆಸ್ತಿ ನಮ್ಮದೇ ಆಗಿದ್ದು ಫೋಟೋದಲ್ಲಿರುವುದು ಎಲ್ಲವೂ ಸುಳ್ಳಾಗಿರುತ್ತದೆಂದು ನುಡಿಯುತ್ತಾರೆ. ದಾವಾ ಆಸ್ತಿಯ ಸ್ವಾಧೀನದಲ್ಲಿರುವ ವಾದಿಗಳನ್ನು ದಾವಾ ಆಸ್ತಿಯಿಂದ ಹೊರಗಡೆ ಹಾಕಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿಯು ಅವರು ಯಾರು ಎಂಬುವುದೇ ನಮಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ನಿ.ಪಿ.-1/ನಿ.ಪಿ.-8 ರ ಪ್ರಕಾರ ದಾವಾ ಆಸ್ತಿಯು ವಾದಿಗಳ ಕುಟುಂಬಕ್ಕೆ ಸೇರಿದ ಸ್ವತ್ತಾಗಿದ್ದು ಅವರುಗಳೇ ಅದರ ಮಾಲೀಕತ್ವ ಹೊಂದಿ ಸ್ವಾಧೀನಾನುಭವ ಹೊಂದಿರುತ್ತಾರೆಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ನಾವು ಸೃಷ್ಟಿಸಿಕೊಂಡ ದಾಖಲೆಗಳ ಬಗ್ಗೆ ವಾದಿಗಳು ಹಲವಾರು ಬಾರಿ ನಮ್ಮನ್ನು ವಿಚಾರಿಸಿ ಸರಿ ಮಾಡಿಕೊಡುವಂತೆ ತಿಳಿಸಿದ್ದು ಅದಕ್ಕೆ ಸರಿ ಮಾಡಿಕೊಡುವುದಾಗಿ ನಾವು ಭರವಸೆ ನೀಡಿರುತ್ತೇವೆಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಗೂ ಹಾಗು ನಮ್ಮ ಕುಟುಂಬಕ್ಕೂ ಯಾವುದೇ ಸಂಬಂಧ ಇರುವುದಿಲ್ಲವೆಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**